# ಮಂಗಳೂರು ವಿಶ್ವವಿದ್ಯಾನಿಲಯ

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಘಟಕ**

**ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ನೀಡಲಾಗುವ ಸೌಲಭ್ಯವನ್ನು ಪಡೆಯಲು ಇರುವ ಅರ್ಹತೆ ಮತ್ತು ವಿಧಾನಗಳು**

**(01.04.2020 ರಿಂದ ಅನ್ವಯಿಸುವಂತೆ)**

| ಕ್ರ.ಸಂ | ಫಲಾನುಭವಿಗಳು | ಸೌಲಭ್ಯದ ವಿವರ | ಅರ್ಹತೆಗಳು | ಸೌಲಭ್ಯ ಪಡೆಯುವ ವಿಧಾನ |
|---|---|---|---|---|
| 1. | 2. | 3. | 4. | 5. |
| 1. | **ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳು** | **ಮಾಸಿಕ ಶಿಷ್ಯವೇತನ:**<br>➢ ಆರಂಭದ 2 ವರ್ಷಗಳವರೆಗೆ **ರೂ.15,000/-**<br>➢ ನಂತರದ 3 ವರ್ಷಗಳಿಗೆ **ರೂ.17,000/-**<br>➢ **ವಾರ್ಷಿಕ ಸಾದಿಲ್ವಾರು** – ಕಲಾ/ವಾಣಿಜ್ಯ/ಶಿಕ್ಷಣ ನಿಕಾಯಕ್ಕೆ – ರೂ.15,000/-<br>– ವಿಜ್ಞಾನ ನಿಕಾಯಕ್ಕೆ – ರೂ.17,000/- | 1. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾತ್ರ ನೀಡುವುದು.<br>2. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳು ಉದ್ಯೋಗಸ್ಥರಾಗಿದ್ದಲ್ಲಿ ಅನ್ವಯವಾಗುವುದಿಲ್ಲ. | ಘಟಕದಿಂದ ಸುತ್ತೋಲೆ ಹೊರಡಿಸಿದ ನಂತರ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು. ನಂತರ ಕಛೇರಿಯ ಆಡಳತಾತ್ಮಕ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಶಿಷ್ಯವೇತನಕ್ಕೆ ಆಯ್ಕೆಯಾದಲ್ಲಿ ಸದರಿ ವಿದ್ಯಾರ್ಥಿಗಳ ಮಾಸಿಕ ಶಿಷ್ಯವೇತನ, ವಾರ್ಷಿಕ ಸಾದಿಲ್ವಾರು ವೆಚ್ಚ ಪಡೆಯಲು ಅರ್ಹರಾಗುತ್ತಾರೆ.<br>➢ ಸಂಶೋಧನಾ ವಿದ್ಯಾರ್ಥಿಗಳು ಮಾಸಿಕ ಶಿಷ್ಯವೇತನ ಬಿಲ್ಲುಗಳನ್ನು ಮಾರ್ಗದರ್ಶಕರ ಧೃಡೀಕರಣೆಯೊಂದಿಗೆ ವಿಭಾಗದ ಅಧ್ಯಕ್ಷರ ಮೂಲಕ ಘಟಕಕ್ಕೆ ಸಲ್ಲಿಸಿ ಶಿಷ್ಯವೇತನ ಪಡೆಯಬಹುದು. |
| | | **ಸಂಶೋಧನಾ ಪ್ರಬಂಧ ತಯಾರಿ ಖರ್ಚು ವೆಚ್ಚ ಮರುಭರಣೆ.**<br>➢ ಕನಿಷ್ಟ **ರೂ.10,000** /- ರಿಂದ ಗರಿಷ್ಟ **ರೂ.15,000/-** | 1. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾತ್ರ ನೀಡುವುದು.<br>2. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳು ಉದ್ಯೋಗಸ್ಥರಾಗಿದ್ದಲ್ಲಿ ಅನ್ವಯವಾಗುವುದಿಲ್ಲ.<br>3. ವಾರ್ಷಿಕ ವರಮಾನದ ಮಿತಿ : ರೂ. 2.5 ಲಕ್ಷದ ಒಳಗೆ – **ರೂ.15,000/-**<br>ರೂ.2.5 ಲಕ್ಷ – ರೂ.10.00ಲಕ್ಷ – **ರೂ.10,000/-** | ಸಂಶೋಧನಾ ಪ್ರಕ್ರಿಯೆ ಮುಗಿದು, ಮಹಾಪ್ರಬಂಧ ಸಲ್ಲಿಕೆ ಕಾರ್ಯ ಮುಗಿದ ನಂತರ ತಗಲಿದ ವೆಚ್ಚ (Thesis Submisson fees+Typing + Printing + Stationery + Binding Cost)ಗಳ ಬಿಲ್ಲುಗಳನ್ನು ಮಾರ್ಗದರ್ಶಕರು ಧೃಢೀಕರಿಸಿ ವಿಭಾಗದ ಅಧ್ಯಕ್ಷರ ಮೂಲಕ ಸಲ್ಲಿಸುವುದು. |
| | | **ವಿದೇಶದಲ್ಲಿ ನಡೆಯುವ ವಿಚಾರ ಸಂಕಿರಣ /ಸಮ್ಮೇಳನದಲ್ಲಿ ಭಾಗವಹಿಸಲು ಸಹಾಯಧನ.**<br>ನೋಂದಣಿ ಶುಲ್ಕ + ವೀಸಾ ವೆಚ್ಚ + ಎಕಾನಮಿ ವಾಯುಯಾನ ದರ + ದಿನಭತ್ಯೆ ಮೊತ್ತ<br>(Per diem Allowance of the Respective Country or Actual) Whichever is less<br>➢ <u>ಪ್ರಯಾಣ ವೆಚ್ಚ</u> : (ಸಂಶೋಧನಾ ಕೇಂದ್ರದಿಂದ ವಿಮಾನ ನಿಲ್ದಾಣ, ವಿಮಾನ ನಿಲ್ದಾಣದಿಂದ ವಿದೇಶಿ ವಿಮಾನ ನಿಲ್ದಾಣ, ವಿದೇಶಿ ವಿಮಾನ ನಿಲ್ದಾಣದಿಂದ ಸಮ್ಮೇಳನ ನಡೆಯುವ ಸ್ಥಳಕ್ಕೆ ಪ್ರಯಾಣಿಸುವುದು, ಮತ್ತು ಅದೇ ರೀತಿ ಹಿಂತಿರುಗುವುದು). | 1. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾತ್ರ ನೀಡುವುದು.<br>2. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳು ಉದ್ಯೋಗಸ್ಥರಾಗಿದ್ದಲ್ಲಿ ಅನ್ವಯವಾಗುವುದಿಲ್ಲ.<br>3. ಸಮ್ಮೇಳನ/ವಿಚಾರ ಸಂಕಿರಣದಲ್ಲಿ ಮೌಖಿಕ/ಪತ್ರಿಕಾ/ಪೋಸ್ಟರ್ ಮಂಡನೆಗೆ ಮಾತ್ರ ಸಹಾಯಧನ ಒದಗಿಸಲಾಗುವುದು.<br>4. ಸಂಶೋಧನಾ ಅವಧಿಯಲ್ಲಿ ಆರಂಭದ 2 ವರ್ಷಗಳನ್ನು ಪೂರೈಸಿದ ನಂತರ ಮುಂದಿನ 3 ವರ್ಷಗಳಲ್ಲಿ ಒಂದು ಬಾರಿ ಮಾತ್ರ ಹಣಕಾಸು ನೆರವು ನೀಡುವುದು.<br>5. ವಿದೇಶದಲ್ಲಿ ನಡೆಯುವ ಸಮ್ಮೇಳನ/ವಿಚಾರ ಸಂಕಿರಣದಲ್ಲಿ ಭಾಗವಹಿಸಲು ನೋಂದಣಿ ಮಾಡಿ ಕಾರಣಾಂತರದಿಂದ ಭಾಗವಹಿಸಲು ವಿಫಲವಾದರೆ ಮುಂಗಡ ಪಡೆದ ಮೊತ್ತವನ್ನು ಸಂಪೂರ್ಣವಾಗಿ ವಿಶ್ವವಿದ್ಯಾನಿಲಯಕ್ಕೆ ಮರು ಭರಿಸಿಕೊಳ್ಳಲಾಗುವುದು. | 1. ವಿದೇಶದಲ್ಲಿ ನಡೆಯುವ ವಿಚಾರ ಸಂಕಿರಣ/ಸಮ್ಮೇಳನದಲ್ಲಿ ಭಾಗಿಯಾಗುವ ಬಗ್ಗೆ ಹಾಗೂ ಮಂಡಿಸಲಿರುವ ಪತ್ರಿಕೆ/ಮೌಖಿಕ ವಿಷಯದ ಸಂಕ್ಷಿಪ್ತ ವರದಿಯೊಂದಿಗೆ ಅನುಮತಿಗಾಗಿ 2 ತಿಂಗಳ ಒಳಗಾಗಿ ಉಚಿತ ಮನವಿ ಸಲ್ಲಿಸುವುದು.<br>2. ಕಛೇರಿಯಿಂದ ಪ್ರಸ್ತಾವನೆಗೆ ಅನುಮತಿ ದೊರೆತ ನಂತರ ಮುಂಗಡ ಮೊತ್ತಕ್ಕಾಗಿ ಕನಿಷ್ಟ 1 ತಿಂಗಳ ಮುಂಚಿತವಾಗಿ ಮನವಿ ಸಲ್ಲಿಸುವುದು.<br>3. ವಿದೇಶ ಪ್ರಯಾಣ ಮುಗಿದ 1 ತಿಂಗಳ ಒಳಗಾಗಿ ಪಡೆದ ಮುಂಗಡ ಮೊತ್ತಕ್ಕೆ ನೋಂದಣಿ ಶುಲ್ಕ/ ಹಾಜರಾತಿ ಪ್ರಮಾಣ ಪತ್ರ/ವಿಮಾನ ಪ್ರಯಾಣದ ಬೋರ್ಡಿಂಗ್ ಪಾಸ್ ಗಳೊಂದಿಗೆ ಹೊಂದಾಣಿಕೆ ಬಿಲ್ಲು ಸಲ್ಲಿಸುವುದು |
| | | **ಸ್ವದೇಶದಲ್ಲಿ ನಡೆಯುವ ವಿಚಾರ ಸಂಕಿರಣ /ಸಮ್ಮೇಳನದಲ್ಲಿ ಭಾಗವಹಿಸಲು ಸಹಾಯಧನ.**<br>➢ ತ್ರಿ-ಟೈರ್ ಹವಾನಿಯಂತ್ರಿತ ದರ್ಜೆ/ಸ್ಲೀಪರ್ ದರ್ಜೆ ರೈಲು ದರ+ನೋಂದಣಿ ಶುಲ್ಕ ಹಾಗೂ ದಿನಭತ್ಯೆ ದರವನ್ನು ನಿಗದಿಪಡಿಸುವುದು.<br>(ದಿನಭತ್ಯೆ ದರವನ್ನು ವಿವಿಧ ನಗರಗಳ ವರ್ಗೀಕರಣದ ಆಧಾರದ ಮೇಲೆ ಸಹಾಯಕ ಪ್ರಾಧ್ಯಾಪಕರ ಕನಿಷ್ಟ ವೇತನ ಶ್ರೇಣಿಗೆ ಅನುಗುಣವಾಗಿ ನೀಡುವುದು.) | 1. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾತ್ರ ನೀಡುವುದು.<br>2. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳು ಉದ್ಯೋಗಸ್ಥರಾಗಿದ್ದಲ್ಲಿ ಅನ್ವಯವಾಗುವುದಿಲ್ಲ.<br>3. ಸಮ್ಮೇಳನ/ವಿಚಾರ ಸಂಕಿರಣದಲ್ಲಿ ಮೌಖಿಕ/ಪತ್ರಿಕಾ/ಪೋಸ್ಟರ್ ಮಂಡನೆ ಮಾತ್ರ ಸಹಾಯಧನ ಒದಗಿಸಲಾಗುವುದು<br>4. ಸಂಶೋಧನಾ ಅವಧಿಯಲ್ಲಿ ವರ್ಷಕ್ಕೊಂದು ಬಾರಿ ಗರಿಷ್ಟ 5 ವರ್ಷಗಳಿಗೆ ಮಾತ್ರ ಹಣಕಾಸು ನೆರವು ನೀಡಲಾಗುವುದು. | 1. ಸ್ವದೇಶದಲ್ಲಿ ನಡೆಯುವ ವಿಚಾರ ಸಂಕಿರಣ/ಸಮ್ಮೇಳನದಲ್ಲಿ ಭಾಗಿಯಾಗುವ ಬಗ್ಗೆ ಹಾಗೂ ಮಂಡಿಸಲಿರುವ ಪತ್ರಿಕೆ/ಮೌಖಿಕ ವಿಷಯದ ಸಂಕ್ಷಿಪ್ತ ವರದಿಯೊಂದಿಗೆ ಪೂರ್ವಾನುಮತಿಗಾಗಿ ಉಚಿತ ಮನವಿ ಸಲ್ಲಿಸುವುದು. |
| 2. | **ಸಂಶೋಧನಾ ವಿದ್ಯಾರ್ಥಿಗಳಿಗೆ (PDF)** | **ವಿದ್ಯಾರ್ಥಿಗಳ ಶಿಷ್ಯವೇತನ/ಸಾದಿಲ್ವಾರು ಮೊತ್ತ.**<br>➢ ಶಿಷ್ಯವೇತನ **ರೂ.15,000/-** ಹಾಗೂ ವಾರ್ಷಿಕ ಸಾದಿಲ್ವಾರು ಮೊತ್ತ **ರೂ.20,000/-** | 1. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾತ್ರ ನೀಡುವುದು.<br>2. ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳು ಉದ್ಯೋಗಸ್ಥರಾಗಿದ್ದಲ್ಲಿ ಅನ್ವಯವಾಗುವುದಿಲ್ಲ. | ಘಟಕದಿಂದ ಸುತ್ತೋಲೆ ಹೊರಡಿಸಿದ ನಂತರ ಸೂಕ್ತ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದು. ನಂತರ ಕಛೇರಿಯ ಆಡಳತಾತ್ಮಕ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಶಿಷ್ಯವೇತನಕ್ಕೆ ಆಯ್ಕೆಯಾದಲ್ಲಿ ಸದರಿ ವಿದ್ಯಾರ್ಥಿಗಳ ಮಾಸಿಕ ಶಿಷ್ಯವೇತನ + ವಾರ್ಷಿಕ ಸಾದಿಲ್ವಾರು ವೆಚ್ಚ ಪಡೆಯಲು ಅರ್ಹರಾಗುತ್ತಾರೆ. |

| | | | | |
|---|---|---|---|---|
| 3. | **ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ.2.50ಲಕ್ಷಕ್ಕೆ ಸೀಮಿತವಾಗಿರುವ ಸ್ನಾತಕೋತ್ತರ ವಿದ್ಯಾರ್ಥಿಗಳು** | ➢ **ಶೈಕ್ಷಣಿಕ ಪ್ರವಾಸಕ್ಕೆ ಸಹಾಯಧನ** : ಗರಿಷ್ಟ ಮಿತಿ **ರೂ. 5,000/-** | 1. ಪಠ್ಯಕ್ರಮದಲ್ಲಿ ಶೈಕ್ಷಣಿಕ ಪ್ರವಾಸ ಕಡ್ಡಾಯವಾಗಿ ಇದ್ದಲ್ಲಿ ದ್ವಿತೀಯ ವರ್ಷದಲ್ಲಿ ಒಂದು ಬಾರಿ ಮಾತ್ರ ನೀಡುವುದು<br>2. ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ 2.50 ಲಕ್ಷ ನಿಗದಿಪಡಿಸಲಾಗಿದೆ | 1. ಶೈಕ್ಷಣಿಕ ಪ್ರವಾಸ/ ಇಂಟರ್ನ್ ಶಿಪ್‌ಗೆ ಮುಂಗಡ ಹಣದ ಅಗತ್ಯವಿದ್ದಲ್ಲಿ ಅಂದಾಜು ವೆಚ್ಚದ ಬಗ್ಗೆ ವಿಭಾಗದ ಮುಖ್ಯಸ್ಥರ ಮೂಲಕ 1 ತಿಂಗಳ ಮುಂಚಿತವಾಗಿ ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರಗಳೊಂದಿಗೆ ಮನವಿ ಸಲ್ಲಿಸುವುದು.<br>2. ಬಿಲ್ಲುಗಳು/ಪ್ರಯಾಣದ ಟಿಕೆಟ್ ಗಳೊಂದಿಗೆ ಸಾದಿಲ್ವಾರು ಬಿಲ್ಲು ಸಲ್ಲಿಸುವುದು.<br>3. ಪ್ರೌಢ ಪ್ರಬಂಧ ವೆಚ್ಚ ಮರುಭರಣೆ ಸಂಬಂಧಿತವಾಗಿ (Typing + Printing + Stationery + Binding Cost)ಗಳ ಬಿಲ್ಲನ್ನು ಸೂಕ್ತ ದೃಢೀಕರಣದೊಂದಿಗೆ ವಿಭಾಗದ ಅಧ್ಯಕ್ಷರ ಮೂಲಕ ಮನವಿ ಸಲ್ಲಿಸುವುದು. |
| | | ➢ **ಪ್ರೌಢ ಪ್ರಬಂಧ (Dissertation Work) ಸಹಾಯಧನ** : ಗರಿಷ್ಟ ಮಿತಿ **ರೂ 6,000/-** | 1. ಪಠ್ಯಕ್ರಮದಲ್ಲಿ ಪ್ರೌಢ ಪ್ರಬಂಧ ( Dissertation Work) ಕಡ್ಡಾಯವಾಗಿ ಇದ್ದಲ್ಲಿ ದ್ವಿತೀಯ ವರ್ಷದಲ್ಲಿ ಒಂದು ಬಾರಿ ಮಾತ್ರ ನೀಡುವುದು.<br>2.ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ 2.50 ಲಕ್ಷ ಮೀರದಂತೆ ನಿಗದಿಪಡಿಸಲಾಗಿದೆ | |
| | | ➢ **ಇಂಟರ್ನ್ ಶಿಪ್ ಸಹಾಯಧನ : ಗರಿಷ್ಟ ರೂ 3,000/-** | 1. ಪಠ್ಯಕ್ರಮದಲ್ಲಿ ಇಂಟರ್ನ್ ಶಿಪ್ ಕಡ್ಡಾಯವಾಗಿ ಇದ್ದಲ್ಲಿ ವ್ಯಾಸಂಗದ ಅವಧಿಯ ಪ್ರಥಮ ವರ್ಷದಲ್ಲಿ ಒಂದು ಬಾರಿ ಮಾತ್ರ ನೀಡುವುದು.<br>2.ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ 2.50 ಲಕ್ಷ ನಿಗದಿಪಡಿಸಲಾಗಿದೆ | |
| | | ➢ **ಸ್ಪೋರ್ಟ್ಸ್‌ಕಿಟ್ ಖರೀದಿಗಾಗಿ ಎಂ.ಪಿ.ಎಡ್./ಬಿ.ಪಿ.ಎಡ್ ಕೋರ್ಸಿನ ವಿದ್ಯಾರ್ಥಿಗಳಿಗೆ ಸಹಾಯಧನ.**<br>ಬಿ.ಪಿ.ಎಡ್/ಎಂ.ಪಿ.ಎಡ್ ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸ್ಪೋರ್ಟ್ಸ್‌ಕಿಟ್ ಖರೀದಿಗಾಗಿ **ರೂ.5,000/-** | 1. ವ್ಯಾಸಂಗದ ಅವಧಿಯ ಪ್ರಥಮ ವರ್ಷದಲ್ಲಿ ಒಂದು ಬಾರಿ ಮಾತ್ರ ನೀಡುವುದು.<br>2. ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ 2.50 ಲಕ್ಷ ನಿಗದಿ ಪಡಿಸಲಾಗಿದೆ. | 1. ವಿಭಾಗದ ಮುಖ್ಯಸ್ಥರು ಪ್ರಥಮ ವರ್ಷದ ವಾರ್ಷಿಕ ವರಮಾನ ರೂ.2.5 ಲಕ್ಷ ಮಿತಿಯಿರುವ ವಿದ್ಯಾರ್ಥಿಗಳಿಗೆ ಕ್ರೀಡಾ ಕಿಟ್ ಖರೀದಿಯ ಸಹಾಯಧನಕ್ಕಾಗಿ ಮನವಿ ಸಲ್ಲಿಸುವುದು.<br>2. ವಿದ್ಯಾರ್ಥಿಗಳ ವಿವರವನ್ನು ಜಾತಿ ಪ್ರಮಾಣ ಪತ್ರ + ಆದಾಯ ಪ್ರಮಾಣ ಪತ್ರಗಳೊಂದಿಗೆ ಕ್ರೋಢೀಕರಿಸಿ ನೀಡುವುದು. |
| 4. | **ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಪದವಿ/ ಸ್ನಾತಕೋತ್ತರ ಪದವಿಯ ಕ್ರೀಡಾಸಾಧಕ ವಿದ್ಯಾರ್ಥಿಗಳು** | ➢ **ಕ್ರೀಡಾ ಸಾಧಕ ವಿದ್ಯಾರ್ಥಿಗಳಿಗೆ ನೀಡುವ** SCSP/TSP **ಅನುದಾನದ ಪ್ರೋತ್ಸಾಹಧನ.**<br>1 Medalist in All India – Inter University Competitions/Medallist in National Championships (Organized by National Federation/ Associations) **ರೂ 30,000/-**<br>2 South zone/Inter University Medallist **ರೂ 20,000/-**<br>3 Participation in All India and South zone Inter University Competitions/Representing Karnataka State in National Championships (Organized by National or State Federations/ Associations) **ರೂ 10,000/-**<br>(**Note:** Sports Kit will be given at only in one stage) | 1. Medallist in All India – Inter University Competitions/Medallist in National Championships (Organized by National Federation/ Associations)<br>2. South zone/Inter University Medallist<br>3. Participation in All India and South zone Inter University Competitions/Representing Karnataka State in National Championships (Organized by National or State Federations/ Associations)<br>(**Note:** Sports Kit will be given at only in one stage) | 1. ಘಟಕದ ವತಿಯಿಂದ ಸುತ್ತೋಲೆ ಹೊರಡಿಸಿದ ನಂತರ ಸೂಕ್ತ ದಾಖಲೆ/ ಪತ್ರಿಕಾ ಫೋಟೋಗಳೊಂದಿಗೆ ಅರ್ಜಿ ಸಲ್ಲಿಸುವುದು.<br>2. ವಿಶ್ವವಿದ್ಯಾನಿಲಯದ ಕ್ರೀಡಾ ವಿಭಾಗದಿಂದ ಅರ್ಜಿಗಳ ಪರಿಶೀಲನೆ ನಂತರ ಅರ್ಹ ಫಲಾನುಭವಿ ಸಾಧಕರನ್ನು ಆಯ್ಕೆ ಮಾಡಿ ಕ್ರೀಡಾ ಕಿಟ್ ಖರೀದಿಗಾಗಿ ಪ್ರೋತ್ಸಾಹಧನ ಮಂಜೂರಾತಿ ಆದೇಶ ನೀಡಲಾಗುವುದು. |
| 5. | **ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಪೂರ್ಣಕಾಲಿಕ ಸಂಶೋಧನಾ ವಿದ್ಯಾರ್ಥಿಗಳು** | ➢ **SCSP/TSP ಅನುದಾನದ ಲ್ಯಾಪ್‌ಟಾಪ್ ವಿತರಣೆ.**<br>**(ಅನುದಾನದ ಲಭ್ಯತೆಯನ್ನು ಪರಿಗಣಿಸಿ)** | 1. ವ್ಯಾಸಂಗದ ಅವಧಿಯ ದ್ವಿತೀಯ ವರ್ಷದಲ್ಲಿ ಒಂದು ಬಾರಿ ನೀಡಲಾಗುವುದು.<br>2. ಕುಟುಂಬದ ವಾರ್ಷಿಕ ವರಮಾನದ ಮಿತಿ ರೂ 5.00 ಲಕ್ಷ ನಿಗದಿಪಡಿಸಲಾಗಿದೆ<br>3. ಅರ್ಜಿ ಸಲ್ಲಿಸುವ ಸ್ನಾತಕೋತ್ತರ ವಿದ್ಯಾರ್ಥಿಗಳು, ಪದವಿ ಹಂತದಲ್ಲಿ SCSP/TSP ಅನುದಾನದಿಂದ ಅಥವಾ ಸರಕಾರದ ಇತರೆ ಯೋಜನೆಯಡಿಯಲ್ಲಿ ಲ್ಯಾಪ್‌ಟಾಪ್ ಪಡೆಯದಿರುವ ಬಗ್ಗೆ ಈ ಹಿಂದಿನ ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಣ ಪಡೆಯುವುದು.<br>4. ಪಿ.ಹೆಚ್.ಡಿ. ವ್ಯಾಸಂಗಕ್ಕಾಗಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಲ್ಯಾಪ್‌ಟಾಪ್ ಅರ್ಜಿ ಸಲ್ಲಿಸುವಾಗ ಸ್ನಾತಕೋತ್ತರ ವ್ಯಾಸಂಗದ ಅವಧಿಯಲ್ಲಿ ಲ್ಯಾಪ್‌ಟಾಪ್ ಪಡೆಯದಿರುವ ಬಗ್ಗೆ ವಿಭಾಗದ ಅಧ್ಯಕ್ಷರು/ಕಾಲೇಜಿನ ಪ್ರಾಂಶುಪಾಲರಿಂದ ದೃಢೀಕರಣ ಪಡೆಯುವುದು. | 1. ಘಟಕದ ವತಿಯಿಂದ ಸುತ್ತೋಲೆ ಹೊರಡಿಸಿ ಅರ್ಜಿ ಅಹ್ವಾನಿಸಿದ ಕೂಡಲೇ ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪ್ರಮಾಣ ಪತ್ರದೊಂದಿಗೆ ಅರ್ಜಿಯನ್ನು ವಿಭಾಗದ ಅಧ್ಯಕ್ಷರ ಮೂಲಕ ಕುಲಸಚಿವರಿಗೆ ಸಲ್ಲಿಸುವುದು.<br>2. ಲ್ಯಾಪ್‌ಟಾಪ್ ಪಡೆಯಲು ಅರ್ಹರಾದ ವಿದ್ಯಾರ್ಥಿಗಳಿಗೆ ಘಟಕದ ಮೂಲಕ ಲ್ಯಾಪ್‌ಟಾಪ್ ನೀಡಲು ಕ್ರಮಕೈಗೊಳ್ಳಲಾಗುತ್ತದೆ.<br>3. ಸರಕಾರದ ಯೋಜನೆಯಡಿಯಲ್ಲಿ ಈ ಹಿಂದೆ ಲ್ಯಾಪ್‌ಟಾಪ್ ಪಡೆದ ವಿದ್ಯಾರ್ಥಿಗಳು ಮತ್ತೊಮ್ಮೆ ಲ್ಯಾಪ್‌ಟಾಪ್‌ಗಾಗಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. |
| | | ➢ **SCSP/TSP ಅನುದಾನದಿಂದ ಬೋಧನಾ ಶುಲ್ಕ ಮರುಭರಣೆ.**<br>**(ಅನುದಾನದ ಲಭ್ಯತೆಯನ್ನು ಪರಿಗಣಿಸಿ)** | 1. **ವಾರ್ಷಿಕ ವರಮಾನದ ಮಿತಿ :**<br>ರೂ. 2.5 ಲಕ್ಷದ ಒಳಗೆ – **100% ಶುಲ್ಕಮರುಭರಣೆ**<br>ರೂ.2.5 ಲಕ್ಷ – ರೂ.10.00ಲಕ್ಷಮಿತಿಯೊಳಗೆ – **50% ಶುಲ್ಕಮರುಭರಣೆ** | 1. ಘಟಕದಿಂದ ಸುತ್ತೋಲೆ ಹೊರಡಿಸಿದ ಕೂಡಲೇ ಸೂಕ್ತ ದಾಖಲೆಗಳೊಂದಿಗೆ ನಿದದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸುವುದು.<br>2. ಕಛೇರಿಯ ಆಡಳತಾತ್ಮಕ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಶುಲ್ಕಮರುಭರಣೆಯ ಮೊತ್ತವನ್ನು ಸದರಿ ವಿದ್ಯಾರ್ಥಿಗಳಿಗೆ ಮಂಜೂರುಗೊಳಸಲಾಗುವುದು. |

❖ **ಹೆಚ್ಚಿನ ವಿವರಗಳಿಗಾಗಿ ಪರಿಶಿಷ್ಟ ಜಾತಿ/ಪಂಗಡ ಘಟಕದ ದೂರವಾಣಿ: 0824-2287547/2287233ಗೆ ಸಂಪರ್ಕಿಸಲು ಸೂಚಿಸಲಾಗಿದೆ.**

**-: ಪ್ರಕಟನೆ: :-**

**ಕುಲಸಚಿವರು, ಆಡಳಿತ ಸೌಧ, ಮಂಗಳೂರು ವಿಶ್ವವಿದ್ಯಾನಿಲಯ.**